ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**440**
ಸದಸ್ಯರ ಹೆಸರು	:	ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	04.02.2021
ಉತ್ತರಿಸುವ ಸಚಿವರು		ಮುಖ್ಯಮಂತ್ರಿಗಳು

*****

	ಪ್ರಶ್ನೆ	ಉತ್ತರ
ಅ)	ಅದಾನಿ ಸಂಸ್ಥೆಯ ಒಡೆತನದ ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಅಡಿಯಲ್ಲಿ ಈ ಹಿಂದೆ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಮೂಲಕ ವಿದ್ಯುತ್ ಖರೀದಿಯ ಒಪ್ಪಂದದ ಅನ್ವಯ 26.05.2005 ರಿಂದ ಮಾರ್ಚ್ ಮಾಹೆ 2020 ರವರೆಗೆ ಪ್ರತಿ ವಿದ್ಯುತ್ ಯುನಿಟ್‌ಗೆ ದರ ರೂ.1.45/- (Fixed Rate) ನಿಗದಿಯಾಗಿದ್ದು, ಪ್ರಸ್ತುತ ಏಪ್ರಿಲ್ 2020 ರಿಂದ ಪ್ರತಿ ಯುನಿಟ್‌ಗೆ ಕನಿಷ್ಟ ದರ ರೂ.2.91/- ರಿಂದ ಗರಿಷ್ಟ ದರ ರೂ.3.72/- ವರೆಗೆ ಖರೀದಿಸುವ ಮೂಲಕ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸುಮಾರು ರೂ.1600 ಕೋಟಿ ರೂಪಾಯಿಗಳ ನಷ್ಟ ಉಂಟಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ:	ವಿದ್ಯುತ್ ಖರೀದಿ ಒಪ್ಪಂದದ ಪ್ರಕಾರ ವಿದ್ಯುತ್ ದರವನ್ನು ಕೇಂದ್ರೀಯ ವಿದ್ಯುತ್ ನಿಯಂತ್ರಣ ಆಯೋಗವು ನಿರ್ಧರಿಸುತ್ತದೆ. ಪ್ರಸ್ತುತ, CERC ಆದೇಶ ದಿನಾಂಕ: 22.01.2020 ರ ಪ್ರಕಾರ Fixed Cost ಪ್ರತಿ ಯೂನಿಟಿಗೆ ರೂ.1.45/ ರಂತೆ ಪಾವತಿಸುತ್ತಿದ್ದೇವೆ. ಎನರ್ಜಿ ದರವು ಪ್ರತಿ ತಿಂಗಳು ಕಲ್ಲಿದ್ದಲು, ಸುಣ್ಣದ ಕಲ್ಲು (ಲೈಮ್) ಮತ್ತು ತೈಲ ದರಗಳ ಏರಿಳಿತ ಮತ್ತು ಅದರ G.C.V (Gross Calorific Value)ಗೆ ಅನುಗುಣವಾಗಿರುತ್ತದೆ. ಎನರ್ಜಿ ದರವು ಏಪ್ರಿಲ್ 2020 ರಿಂದ ಡಿಸೆಂಬರ್ 2020 ರವರೆಗೆ ಕನಿಷ್ಟ ದರ ರೂ.2.756/ ಯೂನಿಟಿಗೂ ಗರಿಷ್ಟ ದರ ರೂ. 3.72 / ಯೂನಿಟ್ ಆಗಿರುತ್ತದೆ. ಸದರಿ ವಿದ್ಯುದಾಗಾರದಿಂದ ಪಡೆಯುವ ವಿದ್ಯುತ್ತನ್ನು ಕೆ.ಇ.ಆರ್.ಸಿ ಮತ್ತು ಸಿ.ಇ.ಆರ್.ಸಿ ರವರ ನಿಯಮಾವಳಿಗಳ ಪ್ರಕಾರವೇ ನಿಭಾಯಿಸುತ್ತಿರುವುದರಿಂದ, ವಿದ್ಯುತ್ ಸರಬರಾಜು ಕಂಪನಿಗಳಿಗೆ ಸುಮಾರು ರೂ.1600 ಕೋಟಿ ನಷ್ಟ ಉಂಟಾಗಿರುವ ಹೇಳಿಕೆಯು ಸತ್ಯಕ್ಕೆ ದೂರವಾಗಿದೆ.
ಆ)	ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು: (ವಿವರ ನೀಡುವುದು)	ಉದ್ಭವಿಸುವುದಿಲ್ಲ.
ಇ)	ಸದರಿ ದುಂದು ವೆಚ್ಚದ ಖರೀದಿಯಿಂದ ಖಾಸಗಿಯವರೆಗೆ ಲಾಭವಾಗುತ್ತಿದ್ದು, ಸರ್ಕಾರದ ಬೊಕ್ಕಸಕ್ಕೆ ಹಾಗೂ ಸಾರ್ವಜನಿಕರ ವಿಶ್ವಾಸಕ್ಕೆ ದಕ್ಕೆಯಾಗುವ ಕುರಿತು ಸರ್ಕಾರದ ಚಿಂತನೆ ಏನು: (ವಿವರ ನೀಡುವುದು)	ವಿದ್ಯುತ್ ಲಭ್ಯತೆಯನ್ನು ಹಾಗೂ ವಿತರಣಾ ಕಂಪನಿಗಳಿಂದ ವಿದ್ಯುತ್ ಬೇಡಿಕೆಯನ್ನು ಪಡೆದು, ವಿತರಣಾ ಕಂಪನಿಗಳ ಬೇಡಿಕೆಗೆ ಅನುಗುಣವಾಗಿ ಮತ್ತು ಕೆ.ಇ.ಆರ್.ಸಿ ಹಾಗೂ ಸಿ.ಇ.ಆರ್.ಸಿ ನಿಯಮಾವಳಿಗಳ ಪ್ರಕಾರ ಉತ್ಪಾದನಾ ಕಂಪನಿಗಳಿಗೆ Schedule ನೀಡಿ ವಿತರಣಾ ಕಂಪನಿಗಳಿಗೆ ವಿದ್ಯುತ್ತನ್ನು ವಿತರಿಸುತ್ತದೆ. ಆದುದರಿಂದ, ಯಾವುದೇ ಒಂದು ನಿರ್ದಿಷ್ಟ ಕಂಪನಿಗೆ ಲಾಭವನ್ನು ಉಂಟು ಮಾಡುವ ಹಾಗೂ ಸರ್ಕಾರದ ಬೊಕ್ಕಸಕ್ಕೆ ಮತ್ತು ಸಾರ್ವಜನಿಕರ ವಿಶ್ವಾಸಕ್ಕೆ ಧಕ್ಕೆಯಾಗುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಈ	ಅದಾನಿ ಸಂಸ್ಥೆ ಮತ್ತು ರಾಜ್ಯ ಸರ್ಕಾರದ ನಡುವೆ ಏರ್ಪಟ್ಟ ಒಡಂಬಡಿಕೆಗೆ ರಾಜ್ಯ ಸರ್ಕಾರದ ಯಾವ ಯಾವ ಇಲಾಖೆಗಳಿಂದ ಒಪ್ಪಿಗೆಯನ್ನು ಪಡೆಯಲಾಗಿದೆ? (ಪೂರ್ಣ ಮಾಹಿತಿಯನ್ನು ದಾಖಲೆ ಸಮೇತ ನೀಡುವುದು)	1200 ಮೆವ್ಯಾ ವಿದ್ಯುಚ್ಛಕ್ತಿ ಉತ್ಪಾದಿಸುವ ಕಲ್ಲಿದ್ದಲು ಆಧಾರಿತ ಉಡುಪಿ ಉಷ್ಣ ವಿದ್ಯುತ್ ಯೋಜನೆಯಿಂದ ಶೇ. 90 ರಷ್ಟು ವಿದ್ಯುಚ್ಛಕ್ತಿಯನ್ನು ಪಡೆಯಲು ಸರ್ಕಾರದ ಅನುಮೋದನೆಯ ಆಧಾರದ ಮೇಲೆ ಕರ್ನಾಟಕ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು 26.12.2005 ರಂದು ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯೊಡನೆ ವಿದ್ಯುತ್ ಖರೀದಿ ಒಪ್ಪಂದವನ್ನು ಮಾಡಿಕೊಂಡಿದ್ದು, 2015 ರಲ್ಲಿ ಈ ಯೋಜನೆಯ ಒಡೆತನವನ್ನು ಮೆ: ಅದಾನಿ ಸಂಸ್ಥೆಯವರು ಪಡೆದುಕೊಂಡಿರುತ್ತಾರೆ. ಸಕ್ಷಮ ಪ್ರಾಧಿಕಾರವಾದ ರಿಜಿಸ್ಟ್ರಾರ್ ಆಫ್ ಕಂಪನೀಸ್ ರವರಿಂದ ಒಡೆತನವನ್ನು ಬದಲಾಯಿಸಲು ಅನುಮತಿಯನ್ನು ಪಡೆದಿರುತ್ತಾರೆ. ಮೆ|| ಅದಾನಿ ಸಂಸ್ಥೆ ಮತ್ತು ರಾಜ್ಯ ಸರ್ಕಾರದ ನಡುವೆ ಈ ಬಗ್ಗೆ ಯಾವುದೇ ಒಡಂಬಡಿಕೆ ಮಾಡಿಕೊಂಡಿರುವುದಿಲ್ಲ. ಈ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಬೇರೆ ಬೇರೆ ಇಲಾಖೆಗಳಿಂದ ಪಡೆಯಬೇಕಾಗಿರುವ ಅನುಮೋದನೆ / ಒಪ್ಪಿಗೆಗಳನ್ನು ಮೆ|| ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ರವರೇ ಪಡೆಯುತ್ತಿದ್ದಾರೆ.

ಸಂಖ್ಯೆ: ಎನರ್ಜಿ 15 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ